ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು-560056

ಸಂ.ಇಎಸ್‌ಟಿ-1/ಇ2/ಇಎನ್‌ಜಿಜಿ-02/98 ದಿನಾಂಕ: 02.07.2021

**ಭೂಮಾಪನಾ ಕೆಲಸಗಳಿಗೆ ಆಸಕ್ತಿ ವ್ಯಕ್ತಪಡಿಸುವಿಕೆ**

# ಪತ್ರಿಕಾ ಪ್ರಕಟಣೆ-2

ಉಲ್ಲೇಖ: ಮಾನ್ಯ ಕುಲಪತಿಗಳ ಆದೇಶ ದಿನಾಂಕ 29.06.2021

---

ಬೆಂಗಳೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿರುವ ಭೂಮಿಯ ಭೂಮಾಪನಾ/ಕಂದಾಯ/ ಭೂದಾಖಲೆ ಹಾಗೂ ಭೂ-ಸಂಬಂಧಿತ ನ್ಯಾಯಾಲಯದಲ್ಲಿರುವ ದಾವೆಗಳ ಕರ್ತವ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರ/ಸ್ಥಳೀಯ ಪ್ರಾಧಿಕಾರದಿಂದ **ನಿವೃತ್ತಿ ಹೊಂದಿರುವ ಅರ್ಹ/ನುರಿತ ಪರಿಣಿತಿ ಹೊಂದಿರುವ** ಆಸಕ್ತಿಯುಳ್ಳ ಅಭ್ಯರ್ಥಿಗಳಿಂದ ಒಂದು 'ಪ್ರಥಮ ದರ್ಜೆ ಭೂಮಾಪಕ' ಹುದ್ದೆಗೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಿಸಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳಿಗೆ ಕರ್ನಾಟಕ ಸರ್ಕಾರದ ಭೂಮಾಪನ ಕಾಯಿದೆ, ನಿಯಮಗಳು ಹಾಗೂ 'ಮೋಜಿಣಿ', 'ಭೂಮಿ' ಹಾಗೂ ಇತರೆ ಭೂ-ಸಂಬಂಧಿತ ಅಂತರ್ಜಾಲದ ತಂತ್ರಾಂಶದ ಹಾಗೂ ಮಾಹಿತಿ ತಂತ್ರಜ್ಞಾನದ ಜ್ಞಾನವು ಅವಶ್ಯವಿರುತ್ತದೆ.

ಆಸಕ್ತರು ಸ್ವ-ವಿವರಗಳುಳ್ಳ ಅರ್ಜಿಯಲ್ಲಿ, ವಿದ್ಯಾರ್ಹತೆ, ಸೇವೆಯ ಕುರಿತು ಮಾಹಿತಿ, ಅನುಭವ, ಪ್ರಮುಖ ಸಾಮರ್ಥ್ಯಗಳ ಕುರಿತು ಪೂರಕದಾಖಲೆಗಳೊಂದಿಗೆ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು-560056ಕ್ಕೆ, **ದಿನಾಂಕ 15.07.2021 ಸಂಜೆ 05.00 ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ.** ಹುದ್ದೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಬೆಂಗಳೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ www.bangaloreuniversity.ac.in ಮುಖಪುಟವನ್ನು ವೀಕ್ಷಿಸಿ ಪಡೆದುಕೊಳ್ಳಬಹುದು.

ಆದೇಶಾನುಸಾರ,

K. Jyothi 5/7/2021
ಕುಲಸಚಿವರು

ಗೆ:

ಸಂಪಾದಕರು
ಬೆಂಗಳೂರು

ಮೇಲ್ಕಂಡ ಪತ್ರಿಕಾ ಪ್ರಕಟಣೆಯನ್ನು ಸುದ್ದಿಯಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು ಕೋರಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು–560056

ಸ[illegible]ಇಎಸ್‌ಟಿ–1/ಇ2/ಇಎನ್‌ಜಿಜಿ–02/98 ದಿನಾಂಕ: 02.07.2021

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಭೂ–ಮಾಪಕರ ಕರ್ತವ್ಯಗಳನ್ನು ನಿರ್ವಹಿಸಲು ಪ್ರಥಮ ದರ್ಜೆ ಭೂಮಾಪಕ ಹುದ್ದೆಗೆ ತಾತ್ಕಾಲಿಕವಾಗಿ (ad-hoc) ನೇಮಿಸಿಕೊಳ್ಳುವ ಕುರಿತು ಹುದ್ದೆಯ ವಿವರಗಳು:

1. ಹುದ್ದೆಯ ಹೆಸರು : ಪ್ರಥಮ ದರ್ಜೆ ಭೂಮಾಪಕ / ಕಾಂಟ್ರಾಕ್ಟ್ ಸರ್ವೇಯರ್
2. ಹುದ್ದೆಯ ಸಂಖ್ಯೆ : ಒಂದು (un-reserved)
3. ವಯೋಮಿತಿ : ಕನಿಷ್ಠ 58 ವರ್ಷಗಳು: ಗರಿಷ್ಠ 65 ವರ್ಷಗಳು
4. ಕ್ರೋಢೀಕೃತ ವೇತನ : ಮಾಸಿಕ ರೂ.35,000/–
5. ಗುತ್ತಿಗೆ ಅವಧಿ : ಒಂದು ವರ್ಷ
6. ಹುದ್ದೆಯ ಕರ್ತವ್ಯಗಳು :
   1. ಬೆಂಗಳೂರು ವಿಶ್ವವಿದ್ಯಾಲಯವು ಯಾವುದೇ ಸಂಸ್ಥೆಗೆ ಜಮೀನನ್ನು ಮಂಜೂರು ಮಾಡಿದಾಗ ಅದನ್ನು ಅಳತೆ ಮಾಡಿ ನಕ್ಷೆ/ಸ್ಕೆಚ್ ಚೆಕ್‌ಬಂದ್ ಹಾಕಿ ಜಮೀನನ್ನು ಹಸ್ತಾಂತರ ಮಾಡಿ ನೋಂದಣಿ/ಲೀಸ್ ಕರಾರುಗಳನ್ನು ಕ್ರಮಬದ್ಧವಾಗಿ ಸಿದ್ಧಪಡಿಸಬೇಕಾಗುತ್ತದೆ.
   2. ರಾಜ್ಯ/ಕೇಂದ್ರ ಸರ್ಕಾರಿ ಸಂಸ್ಥೆಗಳಿಗೆ ಸರ್ವೇ ಇಲಾಖೆಗೆ ಸಂಬಂಧಿಸಿದ ಪತ್ರಗಳಿಗೆ ಉತ್ತರಿಸಬೇಕಾಗುತ್ತದೆ.
   3. ನ್ಯಾಯಾಲಯಗಳಿಗೆ ವಿಶ್ವವಿದ್ಯಾಲಯದ ಜಮೀನಿಗೆ ಸಂಬಂಧಿಸಿದಂತೆ ಕಂಡಿಕೆಗಳಿಗೆ ತಕ್ಕಂತೆ ನಿಖರವಾದ ಉತ್ತರವನ್ನು ನೀಡಬೇಕಾಗುತ್ತದೆ.
   4. 'ಭೂ–ಮಂಜೂರಿ' ಗೆ ಸಂಬಂಧಿಸಿದ ಎಲ್ಲಾ ವಹಿಗಳು ಹಾಗೂ ಕಡತಗಳನ್ನು ನಿರ್ವಹಿಸಿ, ಸರ್ಕಾರಿ ಕಚೇರಿಗಳಿಂದ ನ್ಯಾಯಾಲಯದಲ್ಲಿ ಪುರಾವೆಗಳ ದಾಖಲೆಗಳನ್ನು ತರಬೇಕಾಗಿರುತ್ತದೆ.
   5. ಲೀಸ್/ಬಾಡಿಗೆ ಕೊಟ್ಟಿರುವ ಜಮೀನಿನ ಲೆಕ್ಕಗಳನ್ನು ನಿರ್ವಹಿಸಬೇಕಾಗಿರುತ್ತದೆ.
   6. ಬೆಂಗಳೂರು ವಿಶ್ವವಿದ್ಯಾಲಯದ ಸರಹದ್ದಿನಲ್ಲಿರುವ ಗಡಿಯ ಜಮೀನಿನ ಸುತ್ತಲೂ ಗಡಿರೇಖೆಯ ಬಗ್ಗೆ ಸಂಪೂರ್ಣ ಮಾಹಿತಿಯಿರಬೇಕು.
   7. ಭೂ–ಸಂಬಂಧಿತ ವಿವಾದಗಳ ಕುರಿತು ಕಾನೂನು ಸಲಹೆಗಾರರಿಗೆ ನ್ಯಾಯಾಲದಲ್ಲಿನ ವಿಚಾರಗಳ ಬಗ್ಗೆ ಸಧ್ಯದ ವಿದ್ಯಮಾನ ಬಗ್ಗೆ ತಿಳಿಸುತ್ತಿರಬೇಕು ಹಾಗೂ ಪ್ರಕರಣಗಳ ಬಗ್ಗೆ ವರದಿಯನ್ನು ನಿರಂತರವಾಗಿ ನೀಡುತ್ತಿರಬೇಕು.
   8. ಬೆಂಗಳೂರು ವಿಶ್ವವಿದ್ಯಾಲಯದ ಜಮೀನುಗಳ ಬಗ್ಗೆ ಇರುವ ಪ್ರಕರಣ ಬಗ್ಗೆ ನ್ಯಾಯಾಲಯಗಳಿಗೆ ದಾಖಲೆಗಳು ಮತ್ತು ಸಾಕ್ಷಿಗಳನ್ನು ನೀಡಬೇಕಾಗಿರುತ್ತದೆ.
   9. ಸರ್ಕಾರಿ ಪತ್ರಗಳಿಗೆ/ಲೆಕ್ಕಪರಿಶೋಧನ ಆಕ್ಷೇಪಣೆ/ಮಾಹಿತಿ ಹಕ್ಕು ಅಧಿನಿಯಮ ಇತರೆ ಸಂಸ್ಥೆಗಳಿಂದ ಬಂದ ಪತ್ರಗಳಿಗೆ ಆದ್ಯತೆಯ ಮೇಲೆ ಉತ್ತರಿಸಬೇಕಾಗುತ್ತದೆ.
   10. ಪ್ರತಿ ಬುಧವಾರದಂದು ಬೆಂಗಳೂರು ವಿಶ್ವವಿದ್ಯಾಲಯದ ಜಮೀನಿನ ಸರಹದ್ದುಗಳನ್ನು ಪರಿಶೀಲಿಸಿ ಒತ್ತುವರಿ/ಅನಧಿಕೃತ ಕಾಮಗಾರಿ /ನಿಯಮಬಾಹಿರ ಕಾರ್ಯಗಳು ಕಂಡುಬಂದಲ್ಲಿ ಕೂಡಲೇ ಮೇಲಧಿಕಾರಿಗಳಿಗೆ ವರದಿ ಮಾಡಬೇಕಾಗುತ್ತದೆ. ಹಾಗೂ ಮೇಲೆ ತಿಳಿಸಿದ ಕರ್ತವ್ಯಗಳ ಹೊರತಾಗಿ ವಿ.ವಿ. ಅಧಿಕಾರಿಗಳು ಸೂಚಿಸುವ ಇನ್ನಿತರ ಕರ್ತವ್ಯಗಳನ್ನು ನಿರ್ವಹಿಸಬೇಕು.

**ಇತರೆ ಷರತ್ತು ಮತ್ತು ನಿಬಂಧನೆಗಳು:**

1. ದಾಖಲಾತಿಗಳನ್ನು ಸ್ವಯಂ ದೃಢೀಕರಿಸಿ ಲಗತ್ತಿಸಬೇಕು.
2. ಆಧಾರ್‌ಕಾರ್ಡ ಪ್ರತಿಯನ್ನು ಲಗತ್ತಿಸಬೇಕು.
3. ಪಿಂಚಣಿ ಆದೇಶ ಹಾಗೂ ನಿವೃತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಬೇಕು.
4. ಪೂರ್ಣ ವಿವರಗಳಿಲ್ಲದ, ಅವಶ್ಯ ದಾಖಲಾತಿಗಳಿಲ್ಲದ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಮಾಹಿತಿ ತಂತ್ರಜ್ಞಾನ/ಕಂಪ್ಯೂಟರ್ ತರಬೇತಿ ಕುರಿತು ಅಗತ್ಯ ದಾಖಲೆ ಲಗತ್ತಿಸಬೇಕು.
6. ಈ ಹುದ್ದೆಯು ಯಾವುದೇ ಮಾಂಜೂರಾದ ಹುದ್ದೆಯ ಎದುರಿಗೆ ಮಾಡಲಾದ ನೇಮಕಾತಿಯಾಗಿರುವುದಿಲ್ಲ. ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಪಡಿಸುವ ಹಾಗೂ ನಿಬಂಧನೆಗಳನ್ನು ಬದಲಾಯಿಸುವ ಮತ್ತು ಷರತ್ತನ್ನು ವಿಧಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿರುತ್ತದೆ.
7. ಅವಧಿ ಪೂರ್ಣಗೊಂಡ ನಂತರ ಗುತ್ತಿಗೆಯು ವಿಫಲವಾಗುತ್ತದೆ. ಆದಾಗ್ಯೂ, ಯಾವುದೇ ಕಾರಣ ನೀಡದೆ, ಯಾವುದೇ ಸಮಯದಲ್ಲಿ ಸಕ್ಷಮ ಪ್ರಾಧಿಕಾರಿಯ ತೃಪ್ತಿಯಡಿ ಸೇವಾವಧಿ ಪೂರ್ಣಗೊಳಿಸದೇ ಇದ್ದ ಪಕ್ಷದಲ್ಲಿ ನೇಮಕಾತಿಯನ್ನು ವಜಾಗೊಳಿಸಲಾಗುತ್ತದೆ.
8. ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡು ಬಂದಲ್ಲಿ ಆತನ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿಯನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.
9. ಸಂದರ್ಶನದ ಸಮಯದಲ್ಲಿ ಅಭ್ಯರ್ಥಿ ತಮ್ಮ ಮೂಲ ಮತ್ತು ಸಂಬಂಧಿತ ದಾಖಲೆಗಳನ್ನು ಪರಿಶೀಲನೆಗಾಗಿ ಒದಗಿಸತಕ್ಕದ್ದು.

K Jyothi 5/7/2021

ಕುಲಸಚಿವರು

---